**CC: 551/2023**
**PW: 1**

**<u>ದಿನಾಂಕ: 23.07.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು:-</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.VDD ಅವರಿಂದ</u>**

ನನಗೆ ಕಾಳು ವ್ಯಾಪಾರ ಹಾಗೂ ಬ್ಯಾಂಡ್ ಬಾಜಾ ಕೆಲಸದಿಂದ ವರ್ಷಕ್ಕೆ ಸುಮಾರು 5-6 ಲಕ್ಷ ಆದಾಯ ಇರುತ್ತದೆ. 5-6 ಲಕ್ಷ ಆದಾಯ ಆಗುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ, ಸಾಕ್ಷಿ ಮುಂದುವರೆದು ಕೇಳಿದರೆ ಹಾಜರು ಪಡಿಸುತ್ತೇನೆ ಎಂದು ಹೇಳುತ್ತಾರೆ. ನನ್ನ ಮದುವೆ ಆಗಿ ಸುಮಾರು 15 ವರ್ಷ ಆಗಿರುತ್ತದೆ. ನಮಗೆ 3 ಜನ ಮಕ್ಕಳು ಅದರಲ್ಲಿ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ ಇರುತ್ತಾರೆ. ನನ್ನ ಮಕ್ಕಳು ಬಾಲ ವಿನಾಯಕ ವಿದ್ಯಾನಿಕೇತನದಲ್ಲಿ ಓದುತ್ತಿದ್ದಾರೆ. ಮೂರು ಜನ ಮಕ್ಕಳ ಶಾಲಾ ಖರ್ಚು ವರ್ಷಕ್ಕೆ 50 ಸಾವಿರ ಬರುತ್ತದೆ ಅಂದರೆ ಸರಿ. ನಮ್ಮ ಮನೆ ಖರ್ಚು ವರ್ಷಕ್ಕೆ ಸುಮಾರು 2-3 ಲಕ್ಷ ಆಗುತ್ತದೆ. ನನಗೆ ವರ್ಷಕ್ಕೆ 5-6 ಲಕ್ಷ ಆದಾಯ ಇರುವುದಿಲ್ಲ ಅಂದರೆ ಸರಿಯಲ್ಲ.

ನಿಪಿ.1 ನ್ನು ನೋಡಲಾಗಿ ಅದರಲ್ಲಿ ಬರೆದಿರುವ ಅಕ್ಷರ ಮತ್ತು ಸಹಿಗಳಿಗೆ ಬೇರೆ ಬೇರೆ ಶಾಹಿಯ ವ್ಯತ್ಯಾಸ ಇರುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಅದು ಆರೋಪಿ ಬರೆದುಕೊಟ್ಟಿರುತ್ತಾನೆ ಎಂದು ಹೇಳುತ್ತಾರೆ. ಸದರಿ ನಿ.ಪಿ.1 ರಲ್ಲಿ ಬರೆದಿರುವ ಅಕ್ಷರ, ದಿನಾಂಕ ಮತ್ತು ಹಣವನ್ನು ನಾನೆ ಬರೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ.

ಆರೋಪಿ ದಿ.01.06.2022 ರಂದು 65 ಸಾವಿರ ಹಣ ಮಾತ್ರ ಸಾಲ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ಈ ಹಣವನ್ನು ಮರುಪಾವತಿ ಮಾಡಲು 3 ತಿಂಗಳ ಅವಧಿ ಕೊಟ್ಟಿದ್ದೆ ಅಂದರೆ ಸರಿಯಲ್ಲ. ಆರೋಪಿ 3 ತಿಂಗಳ ಒಳಗೆ ಹಣ ಕೊಡಲಿಲ್ಲ ಎಂದು ದಿ.07.07.2022 ರಂದು ಹಣವನ್ನು ಮರುಪಾವತಿ ಮಾಡಲು ಕೇಳಲು

ಹೋದಾಗ ಆರೋಪಿಯ ತಾಯಿ ಮೊಬೈಲ್ ಮೂಲಕ ನನಗೆ ರೂ.3000/- ಹಣ ವರ್ಗಾವಣೆ ಮಾಡಿರುತ್ತಾರೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಹಣ ಆರೋಪಿಯು ರೂ.25 ಸಾವಿರ ಸಾಲ ತೆಗೆದುಕೊಂಡಿರುವ ಕುರಿತು ಕೊಟ್ಟಿದ್ದು, ಆ ಸಾಲ ಬೇರೆ ಇರುತ್ತದೆ ಎಂದು ಹೇಳುತ್ತಾರೆ. ಆರೋಪಿ ತಾಯಿಗೆ ಸಾಲ ಕೊಟ್ಟಿರುವ ಕುರಿತು ಯಾವುದೇ ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಕೈಗಡ ಸಾಲ ಇರುತ್ತದೆ ಎಂದು ಹೇಳುತ್ತಾರೆ. ಆ ರೀತಿ ನಾನು ಯಾವುದೇ ಕೈಗಡ ಸಾಲ ಅವರಿಗೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಆರೋಪಿಯ ತಾಯಿ ಹಾಗೂ ಅವರ ತಂಗಿ ಜೊತೆ ನನ್ನದು ಯಾವುದೇ ಹಣದ ವ್ಯವಹಾರ ಇಲ್ಲ ಅಂದರೆ ಸರಿ. ಆರೋಪಿ 65 ಸಾವಿರ ಸಾಲ ಮರುಪಾವತಿ ಮಾಡಿಸಲು ದಿ.09.08.2022 ರಂದು ಆರೋಪಿಯ ತಾಯಿ ರೂ.5000/- ನನಗೆ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಅದೇ ರೀತಿ ದಿ.10.09.2022 ಕ್ಕೆ ಆರೋಪಿಯ ತಾಯಿ ರೂ.5000/- ನನಗೆ ಮೊಬೈಲ್ ಮೂಲಕ ವರ್ಗಾವಣೆ ಮಾಡಿರುತ್ತಾರೆ  ಅಂದರೆ ಸರಿಯಲ್ಲ. ಅದೇ ರೀತಿ ದಿ.12.10.2022, 14.11.2022 ಕ್ಕೆ ಆರೋಪಿಯ ತಾಯಿ ರೂ.5000/- ನನಗೆ ಮೊಬೈಲ್ ಮೂಲಕ ವರ್ಗಾವಣೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿಯ ತಾಯಿ ನನಗೆ ಒಟ್ಟು 23 ಸಾವಿರ ಹಣ ಮರುಪಾವತಿ ಮಾಡಿರುತ್ತಾರೆ ಅಂದರೆ ಸರಿಯಲ್ಲ.

ಆರೋಪಿಯ ಕಡೆಯಿಂದ ಇನ್ನೂ ರೂ.37 ಸಾವಿರ ಸಾಲದ ಹಣ ಬಾಕಿ ಇತ್ತು ಅಂದರೆ ಸರಿಯಲ್ಲ. ಇನ್ನೂ 35 ಸಾವಿರ ಹಣ ಕೊಟ್ಟರೆ ಈ ಪ್ರಕರಣವನ್ನು ಕ್ಲೋಸ್ ಮಾಡುತ್ತೇನೆ ಎಂದು ಆರೋಪಿಗೆ ಹೇಳಿದ್ದೆ ಅಂದರೆ ಸರಿಯಲ್ಲ. ಈ ಮಾತನ್ನು ನಂಬಿ ದಿ.17.06.2026 ರಂದು ಆರೋಪಿಯ ತಂಗಿಯು ನನ್ನ SBI ಖಾತೆಗೆ 37 ಸಾವಿರ ಹಣವನ್ನು ಫೋನ್ ಫೇ ಮೂಲಕ ವರ್ಗಾವಣೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಆ ಪ್ರಕಾರ ಆರೋಪಿ ನನ್ನ ಕಡೆಯಿಂದ ತೆಗೆದುಕೊಂಡ ರೂ.65 ಸಾವಿರ ಹಣ ಪೂರ್ತಿ

**CC: 551/2023**
**PW: 1**

ಮರುಪಾವತಿ ಆಗಿರುತ್ತದೆ ಅಂದರೆ ಸರಿಯಲ್ಲ. ಆರೋಪಿ ಕಡೆಯಿಂದ ಹೆಚ್ಚಿಗೆ ಹಣ ಪಡೆಯಲು ಸುಳ್ಳು ಪ್ರಕರಣ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಕಡೆಯಿಂದ ಭದ್ರತೆಗಾಗಿ ಸಹಿ ಮಾಡಿದ ಖಾಲಿ ಚೆಕ್ ಅನ್ನು ಪಡೆದಿದ್ದು, ದುರುಪಯೋಗ ಮಾಡಿ ಸುಳ್ಳು ಪ್ರಕರಣ ಹೂಡಿರುತ್ತೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಜೆ.ಎಮ್.ಎಫ್.ಸಿ ಗದಗ**

ಸಾಕ್ಷಿದಾರರ ಸಹಿ